**ದಿನಾಂಕಃ 24-06-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟಿ ಸವಾಲು: ಆರೋಪಿ ಪರ ವಕೀಲರಿಂದಃ**

1) ನನಗೆ ದುರದುಂಡಿ ಗ್ರಾಮದಲ್ಲಿ ಸರ್ವೆ ನಂಬರ 6/4 ರಲ್ಲಿ 39 ½ ಗುಂಟೆ, ಅರಭಾಂವಿ ಗ್ರಾಮದಲ್ಲಿ ಸರ್ವೆ ನಂಬರ 185/9 ರಲ್ಲಿ 25 ಗುಂಟೆ, ಸರ್ವೆ ನಂಬರ 185/3+ಅ+2 ರಲ್ಲಿ 14 ಗುಂಟೆ ಇದ್ದು ಉಳಿದ ಜಮೀನುಗಳು ನನ್ನ ಸಹೋದರರು ಮತ್ತು ನನ್ನ ಹೆಸರಿನಲ್ಲಿ ಜಂಟಿಯಾಗಿರುತ್ತವೆ. ಕೆವಿಜಿ ಬ್ಯಾಂಕ್ ಅರಭಾಂವಿಯಲ್ಲಿ ರೂ. 1,40,000/-, ಪ್ರಾಥಮಿಕ ಕೃಷಿ ಪತ್ತಿನ ಸೊಸಾಯಟಿ ಅರಭಾಂವಿಯಲ್ಲಿ ರೂ. 52,000/- ಸಾಲವನ್ನು ಪಡೆದಿರುತ್ತೇನೆ. ಸದರಿ ಸಾಲವನ್ನು 6-7 ವರ್ಷಗಳ ಹಿಂದೆ ಪಡೆದಿರುತ್ತೇನೆ. ಸದರಿ ಸಾಲವನ್ನು ಕೃಷಿ ಚಟುವಟಿಕೆ ಮಾಡಲು ಪಡೆದಿರುತ್ತೇನೆ. ಸದರಿ ಸಾಲವನ್ನು ನಾನು ಪೂರ್ತಿ ಮರುಪಾವತಿ ಮಾಡಿರುವುದಿಲ್ಲ, ಚಾಲ್ತಿಯಲ್ಲಿರುತ್ತದೆ. ನಾನು ಪಡೆದ ಸಾಲವನ್ನು ಮರಳಿ ತುಂಬುತ್ತಿರುತ್ತೇನೆ. ನನ್ನ ಹತ್ತಿರ ಆದಾಯ ಹಾಗೂ ಹಣಕಾಸಿನ ಮೂಲ ಇಲ್ಲದ ಕಾರಣ ನಾನು ಸದರಿ ಸಾಲವನ್ನು ಇನ್ನೂ ತುಂಬಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ನನ್ನ ಹತ್ತಿರ ಹೊರತು ಪಡಿಸಿ, ಬೇರೆ ಕಡೆ ಸಾಲ ಪಡೆದ ಬಗ್ಗೆ ನಾನು ಕೇಳಿರುವುದಿಲ್ಲ. ನನ್ನ ದೂರಿನಲ್ಲಿರುವ ಖಂಡಿಕೆ 2 ರಲ್ಲಿಯ ವಿಷಯಗಳನ್ನು ನಾನು ಹೇಳಿ ಬರೆಸಿರುವುದಿಲ್ಲ ಎಂದರೆ ಸರಿಯಲ್ಲ.

2) ನಾನು ಆರೋಪಿಯ ಮೇಲಿನ ವಿಶ್ವಾಸದಿಂದ ಕೈಗಡ ಸಾಲ ಕೇಳಿದ್ದರಿಂದ ರೂ. 3,00,000/- ಹಣವನ್ನು ನಗದಿನಲ್ಲಿ ನೀಡಿರುತ್ತೇನೆ. ನಾನು ಆರೋಪಿಗೆ ರೂ. 3,00,000/- ನೀಡಿದ ಬಗ್ಗೆ ಮುಂದಿನ ದಿನಗಳಲ್ಲಿ ದಾಖಲೆ ಹಾಜರುಪಡಿಸುತ್ತೇನೆ. ನನ್ನ

ಹತ್ತಿರ ಹಣ ಇದ್ದ ಬಗ್ಗೆ ತೋರಿಸಲು ದಾಖಲೆ ಇದ್ದು, ಮುಂದಿನ ದಿನಗಳಲ್ಲಿ ದಾಖಲೆ ಹಾಜರುಪಡಿಸುತ್ತೇನೆ. ನಾನು ಆರೋಪಿಗೆ ಹಣ ನೀಡುವಾಗ, ನನ್ನ ಹಾಗೂ ಆರೋಪಿಯ ಕುಟುಂಬದವರನ್ನು ಹೊರತು ಪಡಿಸಿ ಬೇರೆ ಯಾರು ಹಾಜರು ಇರಲಿಲ್ಲ. ದೂರಿನಲ್ಲಿ , ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಆರೋಪಿಗೆ ಯಾರ ಸಮಕ್ಷಮ ಹಣ ನೀಡಿರುತ್ತೇನೆ ಎಂದು ಹೇಳಿರುವುದಿಲ್ಲ. ನಾನು ಆರೋಪಿಗೆ ಹೊರತುಪಡಿಸಿ ಬೇರೆ ಯಾರಿಗೂ ಹಣ ನೀಡಿರುವುದಿಲ್ಲ.

3) ನಾನು ಲೇವಾದೇವಿಗಾರನಾಗಿರುವುದಿಲ್ಲ ಆದಕಾರಣ ಪರವಾನಿಗೆಯನ್ನು ಹೊಂದಿರುವುದಿಲ್ಲ. ನಾನು ಆರೋಪಿಗೆ ಕಳುಹಿಸಿದ ನೋಟಿಸು, ಅವರಿಗೆ ತಲುಪಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ನನಗೆ ಚೆಕ್ಕು ನೀಡಿರುವುದಿಲ್ಲ ಮತ್ತು ಅದರಲ್ಲಿ ಸಹಿಯನ್ನು ಸಹ ಮಾಡಿರುವುದಿಲ್ಲ, ನಾನು ಆರೋಪಿಯ ಚೆಕ್ಕನ್ನು ದುರುಪಯೋಗ ಪಡಿಸಿಕೊಂಡು ಅದನ್ನು ಭರ್ತಿ ಮಾಡಿ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರಸ್ತುತ ಪ್ರರಕಣಕ್ಕೂ, ಪ್ರಕರಣದ ಹಣಕ್ಕೂ, ಆರೋಪಿಗೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃಇಲ್ಲ**

( ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

ಪ್ರ.ದಿ.&ನ್ಯಾದಂ., ಗೋಕಾಕ.